ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ದಂಧೆಗೆ ಕಡಿವಾಣ ಹಾಕಿ

ಕನ್ನಡ ಸಿನಿಮಾ ಕ್ಷೇತ್ರವನ್ನು ಬೆಳೆಸಲು ರಾಜ್ಯ ಸರಕಾರ ಕನ್ನಡ ಪ್ರಾದೇಶಿಕ ಭಾಷೆಯ ಸಿನಿಮಾಗಳಿಗೆ ಸಹಾಯ ಧನ ನೀಡುತ್ತಿರುವುದು ಶ್ಲಾಘನೀಯ. ಪ್ರತಿ ವರ್ಷ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಗುಣಾತ್ಮಕ ಸಿನಿಮಾಗಳನ್ನು ಗುರುತಿಸಿ, ಸಹಾಯ ಧನ ನೀಡುತ್ತಿದೆ. ಈ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮರೆಯಾಗಿ ರಾಜಕೀಯ ಲಾಭ, ಪ್ರಭಾವ ಬಳಸಿ, ಲಂಚ ನೀಡಿ ಸಬ್ಸಿಡಿ ಪಡೆಯುತ್ತಿರುವುದು ಸಿನಿಮಾ ಕ್ಷೇತ್ರಕ್ಕೆ ಕಳಂಕವಾಗಿದೆ. ಮಕ್ಕಳ ಚಲನಚಿತ್ರ, ಚಾರಿತ್ರಿಕವಾಗಿ ಚಿತ್ರಗಳನ್ನು ತಯಾರಿಸುವ ಪ್ರತಿಭೆಗಳಿಗೆ ನೆರವಾಗಲಿಯೆಂದು ಕನ್ನಡ ಚಿತ್ರರಂಗವನ್ನು ಉನ್ನತ ಮಟ್ಟಕ್ಕೇರಿಸುವ ಯೋಜನೆಗಳನ್ನು ಜಾರಿ ಮಾಡಿದರೆ, ಇತ್ತ ಸರಕಾರಿ ಅಧಿಕಾರಿಗಳು, ನಿವೃತ್ತ ಅಧಿಕಾರಿಗಳು ಬೇನಾಮಿ ಹೆಸರಲ್ಲಿ ಮಕ್ಕಳ ಚಿತ್ರ, ಚಾರಿತ್ರಿಕ ಚಿತ್ರಗಳನ್ನು ನಿರ್ಮಿಸಿ 25 ಲಕ್ಷದವರೆಗೆ ಸಬ್ಸಿಡಿ ಪಡೆಯುತ್ತಿರುವುದು. ಲಂಚಕೊಟ್ಟರೆ ಕಾಯಂ ಎನ್ನುವ ಮನೋಭಾವನೆ ಚಿತ್ರರಂಗಕ್ಕೆ ತುಂಬ ಅಪಾಯಕಾರಿ ಹೀಗೆ ಮುಂದುವರಿದರೆ ಮುಂದೊಂದು ದಿನ ಕನ್ನಡ ಚಿತ್ರರಂಗ ತನ್ನ ಮಹತ್ವ ಕಳೆದುಕೊಳ್ಳುತ್ತದೆಂಬುದರಲ್ಲಿ ಸಂಶಯವೇ ಇಲ್ಲ. ಮಧ್ಯವರ್ತಿಗಳ, ಇಲಾಖೆಗಳನ್ನು ಶಿಫಾರಸು ಮಾಡುವವರ ವಿರುದ್ಧ ಸರಕಾರ ಕಠಿಣ ಕ್ರಮಕೈಗೊಳ್ಳಬೇಕು. ನಮ್ಮ ನಾಡಿನ ಸಂಸ್ಕೃತಿ, ನಾಡಿನ ಪರಂಪರೆ ಪರಿಚಯಿಸುವ ಸಿನಿಮಾಗಳಿಗೆ ಮಾತ್ರ ಸಬ್ಸಿಡಿ ನೀಡಲಿ.

– **ಅಫ್ರೀನ್ ಪತ್ರಿಕೋದ್ಯಮ ವಿದ್ಯಾರ್ಥಿ**, ಗಂಗಾವತಿ

ಸಂತ್ರಸ್ತರಿಗೆ ಪರಿಹಾರ

ರಾಜ್ಯದಲ್ಲಿ ಕೃಷ್ಣ ಮಲಪ್ರಭಾ, ಘಟಪ್ರಭಾ, ತುಂಗಾಭದ್ರ ನದಿಗಳ ಪ್ರವಾಹಕ್ಕೆ ಉತ್ತರ ಕರ್ನಾಟಕದ ನಾನಾ ಜಿಲ್ಲೆಗಳಾದ ಬಾಗಲಕೋಟೆ, ಹುಬಳ್ಳಿ, ಕೊಡಗು, ಬಳ್ಳಾರಿ, ಗದಗ, ರಾಯಚೂರು ಜಿಲ್ಲೆಗಳು ಈಗಾಗಲೇ ತತ್ತರಿಸಿ 1 ತಿಂಗಳು ಕಳೆದಿವೆ. ಮತ್ತೊಮ್ಮೆ ಪ್ರವಾಹದ ಭೀತಿ ಎದುರಿಸುತ್ತಿದ್ದು, ಜನರ ಆಕ್ರಂದ ದೇವರೇ ಬಲ್ಲ. ಆದರೆ, ನೆರೆ ಸಂತ್ರಸ್ತರಿಗೆ ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಸೂಕ್ತ ಪರಿಹಾರ ವಿಳಂಬಯಾಗಿದೆ. ರಾಷ್ಟ್ರದಲ್ಲಿ ನೂತನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಂಡವಾಳವಿದೆ. ಬಡವರ ಬದುಕು ಕಟ್ಟಿಕೊಡಲು ಬಂಡವಾಳದ ಕೊರತೆ ಕಾಣುತ್ತಿದೆ ಈ ಸರಕಾರಗಳಿಗೆ. ಅಧಿಕಾರಿ ಲಾಲಸೆಯನ್ನು ಬಿಟ್ಟು ಹೊರಬಂದು ಚಳಿ, ಮಳೆ, ಸೂರು ಇಲ್ಲದೆ ಜೀವನ ನಡೆಸುವವರ ಕಷ್ಟಗಳನ್ನು ಬೇಗ ಪರಿಹರಿಸಲಿ.

– **ಅರುಣಾ ಸಣಪುರ**, ಬಳ್ಳಾರಿ

ರಸ್ತೆಗಳನ್ನೂ ಸುಧಾರಿಸಬೇಕು

ಕೇಂದ್ರ ಸರಕಾರವು ಇತ್ತೀಚೆಗೆ ಮೋಟಾರು ವಾಹನಗಳಿಗೆ ಭಾರೀ ಮೊತ್ತದ ದಂಡವನ್ನು ವಿಧಿಸುವ ನಿಯಮಾಳಿಯನ್ನು ಜಾರಿಗೊಳಿಸಿದ್ದು ಇದಕ್ಕೆ ಕೆಲವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇದು ಸರಿಯಾದ ಕ್ರಮವಲ್ಲ, ಇದರಿಂದ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿದೆ ಎಂದು ದೂರುತ್ತಿದ್ದಾರೆ. ಹಾಗಾದರೆ ನಮ್ಮ ದೇಶದಲ್ಲಿ ಸಾರ್ವಜನಿಕ ಶಿಸ್ತು ಮೂಡಿಸುವುದು ಹೇಗೆ? ಸಿಗ್ನಲ್ ಜಂಪ್ ಮಾಡುವುದು, ಎಗ್ಗಿಲ್ಲದೆ ವಾಹನ ಚಲಾಯಿಸುವುದು ಹೀಗೆ ಹೇಳುತ್ತ ಹೋದರೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಈ ಮೊದಲು ಇವುಗಳ ಎಲ್ಲವೂಂದಕ್ಕೆ ಹೋಲಿಸಿದರೆ ತೀರಾ ಕಡಿಮೆ, ಹಾಗಾಗಿ ಈಗಿನ ದುಬಾರಿ ದಂಡಕ್ಕೆ ಹೆದರಿಯಾದರೂ ರಸ್ತೆ ನಿಯಮಗಳನ್ನು ಪಾಲಿಸುತ್ತಾರೆ. ಇದರಿಂದ ಎಲ್ಲರಿಗೂ ಒಳ್ಳೆಯದು. ನಾವು ಸರಿಯಾದ ದಾಖಲೆಗಳನ್ನು ಹೊಂದುವುದು ನಿಯಮಗಳನ್ನು ಪಾಲಿಸಿದರೆ ದಂಡದ ಪ್ರಶ್ನೆಬರುವುದಿಲ್ಲವಲ್ಲ. ಇನ್ನು ಸಾರ್ವಜನಿಕರಿಂದ ದುಬಾರಿ ಮೊತ್ತದ ದಂಡವನ್ನು ವಸೂಲಿ ಮಾಡುವ ಸರಕಾರ ಅದಕ್ಕೆ ತಕ್ಕಂತೆ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಬೇಕಲ್ಲವೆ? ರಸ್ತೆ ಗುಂಡಿಗಳಿಗೆ ಬಿದ್ದು ಅನೇಕ ಅಪಘಾತಗಳು ಸಂಭವಿಸುವುತ್ತಿರುವುದು ಗೊತ್ತಿರುವಂಥದ್ದೆ. ಹಾಗಾಗಿ ರಸ್ತೆಗಳನ್ನು ಸುಧಾರಿಸುವ ಕೆಲಸವನ್ನು ಸರಕಾರಗಳು ಮಾಡಬೇಕಿದೆ.

–**ಆದೇಶ ಹೂಗಾರ್**, ರಾಯಚೂರು

ಭಟ್ಟರ್ ಸ್ಕಾಚ್

- **ನವೀನ ಶೇರಿಕಾರ**, ಮಂಗಳೂರು

ನಾಲ್ಕು ಲಕ್ಷ ಕಿಮೀ ದೂರ ಕ್ರಮಿಸಲು ಇಸ್ರೋ ಸಾವಿರ ಕೋಟಿ ಖರ್ಚು ಮಾಡಿದ್ದು ನ್ಯಾಯವಾ?

– ವೈಟ್ ಟಾಪಿಂಗ್ ಹೆಸರಲ್ಲಿ ಬಿಬಿಎಂಪಿ ಗೆ ನೂರು ಕಿಮೀಗೇ ಸಾವಿರ ಕೋಟಿ ಬಿಲ್ ಮಾಡಿದ್ದು ನ್ಯಾಯವಾ?!

- **ಕರುಣಾಕರ ರೆಡ್ಡಿ**, ಆರ್.ಆರ್.ನಗರ

ಡಿಕೆಶಿ ಬಂಧಿಸಿದ್ದೇ ದೊಡ್ಡ ತಪ್ಪಾ?

– ದುಡ್ಡು ತಿಂದವರನ್ನೆಲ್ಲಾ ಬಂಧಿಸಿದ್ದಾರೆ, ಅವರೊಬ್ಬರನ್ನೇ ಬಂಧಿಸಿದ್ದು ತಪ್ಪಲ್ಲವಾ?!

- **ರಘು ಎಂ.**, ಕದಿರೇನಹಳ್ಳಿ

ಬೆಂಗಳೂರಿನಂಥ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ಮಾಡಿದರೆ ಜನರಿಗೆ ತೊಂದರೆ ಆಗುವುದಿಲ್ಲವಾ?

– ತೊಂದರೆ ಆಗಲಿ ಎಂಬುದೇ ಉದ್ದೇಶ!

- **ಸತ್ಯವತಿ** (ಇಮೇಲ್ ಮೂಲಕ)

ಯಡಿಯೂರಪ್ಪ ಅವರು ದಿನಕ್ಕೆ ಹದಿನಾರು ಗಂಟೆ ಕೆಲಸ ಮಾಡ್ತಾರಂತೆ, ನಿಜವಾ ?

– ಉಳಿದ ಎಂಟು ಗಂಟೆ ಹೇಗೆ ಕಳೆಯೋದು ಅಂತ ಯೋಚಿಸ್ತಾ ಇದ್ದೀನಿ ಅಂತ ಹೇಳಿದರಂತೆ!

- **ಶರತ್ ಬಾಳೆಹೊಂಡ**, ಬೆಂಗಳೂರು

ಉಗ್ರಪ್ಪ ಅವರು ಬಾಯಿ ತೆರೆದರೆ ಹಾಗೇಕೆ ಸಾರ್?

– ಜಯವೀರ ಗೌಡರ ಪಕ್ಕದ ಲೇಖನ ಓದಿ, ಗೊತ್ತಾಗುತ್ತೆ!

- **ಅನುಶ್ರೀ**, (ಇಮೇಲ್ ಮೂಲಕ)

ಶ್ರೀನಗರ ಕಿಟ್ಟಿ ಅವರ ಅಭಿಮಾನಿಗಳ ಸಂಘ ಕಟ್ಟಬೇಕೆಂದಿರುವೆ, ನಿಮ್ಮ ಸಲಹೆ?

– ಶ್ರೀನಗರ ಕಿಟ್ಟಿ ನಿರುದ್ಯೋಗಿ ಮಾಜಿ ಯುವಕರ ಸಂಘ ಅಂತ ಹೆಸರಿಡು!

- **ಜಯಚಂದ್ರ ಬಾಗೇವಾಡಿ**, ಬೆಂಗಳೂರು

ಸಿದ್ದರಾಮಯ್ಯ ಅವರ ಮಾಧ್ಯಮ ಕಾರ್ಯದರ್ಶಿ ದಿನೇಶ ಅಮೀನ್ ಮಟ್ಟು ಎಲ್ಲಿ ಸಾರ್!

– ಮೀನು ಕಾಣೆ!

- **ಅಗರಂ ದಿನೇಶ**, ಮೈಸೂರು

ನನ್ನ ಸಂಗೀತ ಅಭ್ಯಾಸದಿಂದ ಪಕ್ಕದ ಮನೆಯವರಿಗೆ ಡಿಸ್ಟರ್ಬ್ ಆಗುವುದಂತೆ, ಏನು ಮಾಡಲಿ?

– ಪಕ್ಕದ ಮನೆಯವರೆಲ್ಲ ರಾತ್ರಿ ಮಲಗಿದ ನಂತರ ಅಭ್ಯಾಸ ಶುರು ಮಾಡ್ಕೊಳ್ಳಿ!

- **ರಾಜೇಶ್ವರಿ ಶರ್ಮ**, ಕೆಂಗೇರಿ

ಕೆಲವು ವಸ್ತುಗಳು ಎಷ್ಟೇ ಸುತ್ತಿದರೂ ಸಿಗುವುದಿಲ್ಲವಲ್ಲ ಭಟ್ರೇ?

– ಹೂಂ ಕಣಮ್ಮ, ಕೆಂಗೇರಿಯಲ್ಲಿ ಹುಡುಕಿದರೂ ಸಿಗೊಲ್ಲ, ಶೃಂಗೇರಿಯಲ್ಲಿ ಹುಡುಕಿದರೂ ಸಿಗೊಲ್ಲ!

- **ಲಕ್ಷ್ಮಣ ಗೌಡ**, ರಾಮನಗರ

ಹೆಂಗಸರಿಗೆ ಒಮ್ಮೊಮ್ಮೆ ಟಿವಿ ಕಂಡರೆ ಸಿಟ್ಟೇಕೆ ಭಟ್ರೇ?

– ಎಲ್ಲರೂ ಟಿವಿಯನ್ನೇ ನೋಡ್ತಾರಲ್ಲ ಅಂತ ಇರಬಹುದು!

ಕಠಿಣ ಸಂಚಾರ ನಿಯಮ ಕುರಿತು ಅಪಸ್ವರ ಏಕೆ?

ವಿಮರ್ಶೆ

ಗಣೇಶ್ ಭಟ್, ವಾರಾಣಸಿ

vveditoped@gmail.com

> **ಜೀವಕ್ಕಿಂತ ಅಮೂಲ್ಯವಾದದ್ದು ಯಾವುದೂ ಅಲ್ಲ. ಪ್ರಜೆಗಳ ಜೀವಕ್ಕೆ ಹಾನಿಯಾಗದಂತೆ ತಡೆಗಟ್ಟುವುದು ಸರಕಾರದ ಆದ್ಯ ಕರ್ತವ್ಯವಾಗಿದೆ. ವಾಹನ ಸಂಚಾರ ನಿಯಮಗಳನ್ನು ಬಿಗಿಗೊಳಿಸುವುದರ ಮೂಲಕ ಚಾಲನಾ ಅಪರಾಧಗಳನ್ನು ಕಡಿಮೆಗೊಳಿಸಿ ಜೀವಹಾನಿಯನ್ನು ತಡೆಗಟ್ಟುವುದು ಸರಕಾರದ ಈ ಕ್ರಮದ ಹಿಂದಿನ ಪ್ರಮುಖ ಉದ್ದೇಶವಾಗಿದೆ. ಹಳೆಯ ಕಾನೂನು ಅಷ್ಟು ಪರಿಣಾಮಕಾರಿಯಲ್ಲ ಎಂದಾದಾಗ ಕಾನೂನನ್ನು ಪರಿಷ್ಕೃತಗೊಳಿಸುವುದು ಅನಿವಾರ್ಯವಾಗುತ್ತದೆ.**

ನಮ್ಮ ಜನರ ಮನಸ್ಥಿತಿ ಬಹಳ ವಿಚಿತ್ರ. ಒಳ್ಳೆಯ ಪರಿಣಾಮಕಾರೀ ಕಾನೂನುಗಳು ಬೇಕು ಅನ್ನುತ್ತಾರೆ. ಆದರೆ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದರೆ ಅದಕ್ಕೆ ನೂರು ಆಕ್ಷೇಪಗಳನ್ನು ಹೇಳುತ್ತಾರೆ. ವ್ಯವಸ್ಥೆ ಸರಿಯಿಲ್ಲ, ಬದಲಾಗಬೇಕು ಎಂದು ಜನರು ಹೇಳುತ್ತಲೇ ಇರುತ್ತಾರೆ. ಆದರೆ ವ್ಯವಸ್ಥೆಯನ್ನು ಬದಲಾಯಿಸುವ ಪ್ರಯತ್ನ ಆರಂಭವಾದಲ್ಲಿ ಇದೇ ಜನ ಅದನ್ನು ವಿರೋಧಿಸುತ್ತಾರೆ. ಬದಲಾವಣೆಗೋಸ್ಕರ ಸ್ವಲ್ಪವೂ ಕಷ್ಟವನ್ನು ಅಥವಾ ತೊಂದರೆಯನ್ನು ಅನುಭವಿಸಲು ಸಿದ್ಧರಿಲ್ಲ. ಆರಂಭಿಕ ಹಂತದಲ್ಲಿ ಆಗುವ ಅನನುಕೂಲತೆಯನ್ನು ಸಕಾರಾತ್ಮಕ ದೃಷ್ಟಿಯಿಂದ ಸ್ವೀಕರಿಸದೆ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವವರು ನಾವು. ಯಾವುದೇ ಬದಲಾವಣೆಯ ಪ್ರಯತ್ನಗಳನ್ನು ನಡೆಯಿಸಿದಾಗಲೂ ಗೊಣಗಾಡುವ ಹಾಗೂ ದೂರುವ ಪ್ರವೃತ್ತಿಯನ್ನು ಮುಂದುವರಿಸುತ್ತೇವೆ. ದೂರಗಾಮಿ ದೃಷ್ಟಿಕೋನದ ಕೊರತೆಯೇ ಇದಕ್ಕೆ ಕಾರಣ.

ಇತ್ತೀಚೆಗೆ ದಿನಾಂಕ 01.09.2019 ರಿಂದ ಅನ್ವಯವಾಗುವಂತೆ ಕೇಂದ್ರ ಸರಕಾರ ಸಂಚಾರ ನಿಯಮಗಳನ್ನು ಬಿಗುಗೊಳಿಸಿದೆ. ಜನರು ಬದಲಾದ ವ್ಯವಸ್ಥೆಯ ವಿರುದ್ಧ ಅಲ್ಲಲ್ಲಿ ಗೊಣಗಾಟ ಆರಂಭಿಸಿದ್ದಾರೆ. ಸಂಚಾರ ನಿಯಮವನ್ನು ಉಲ್ಲಂಘನೆ ಮಾಡುವವರ ವಿರುದ್ಧ ಶಿಕ್ಷೆಯನ್ನು ಈಗ ಕಠಿಣಗೊಳಿಸಲಾಗಿದೆ. ಅಪಾಯಕಾರಿ ಹಾಗೂ ಅಜಾಗರೂಕ ರೀತಿಯಲ್ಲಿ ವಾಹನ ಚಲಾಯಿಸುವವರ ಮೇಲಿನ ದಂಡದ ಪ್ರಮಾಣವು ಈ ಮೊದಲು 1000ರು. ಇದ್ದಿದ್ದು ಈಗ ಅದನ್ನು 10,000 ರುಪಾಯಿಗೆ ಏರಿಸಲಾಗಿದೆ. ಕುಡಿದು ವಾಹನ ಚಾಲನೆ ಮಾಡುವವರ ಮೇಲಿನ ದಂಡದ ಪ್ರಮಾಣವನ್ನು ಕೂಡಾ 10,000 ರುಪಾಯಿಗೆ ಏರಿಸಲಾಗಿದೆ. ಕುಡಿದು ವಾಹನ ಚಾಲನೆ ಮಾಡಿದ್ದಕ್ಕೆ ಮೊದಲ ಬಾರಿ ಸಿಕ್ಕಿ ಬಿದ್ದಾಗ 6 ತಿಂಗಳ ಜೈಲುಶಿಕ್ಷೆ ಹಾಗೂ ಎರಡನೇ ಬಾರಿ ಸಿಕ್ಕಿ ಬಿದ್ದರೆ 2 ವರ್ಷಗಳ ಜೈಲು ಶಿಕ್ಷೆಯನ್ನೂ ವಿಧಿಸಲಾಗುವುದು. ವಾಹನ ವಿಮೆ ಇಲ್ಲದೆ, ವಾಹನ ಚಲಾವಣೆ ಮಾಡುವವರ ಮೇಲೆ 2000 ರು. ದಂಡ ವಿಧಿಸಲಾಗುತ್ತಿದೆ. ಅತಿ ವೇಗದ ಚಾಲನೆ, ಹೆಲ್ಮೆಟ್ ಇಲ್ಲದೆ ದ್ವಿಚಕ್ರ ವಾಹನ ಚಲಾಯಿಸುವ ಅಕ್ರಮಗಳಿಗೆ ಸಹ ಅಧಿಕ ದಂಡ ಮತ್ತು ವಾಹನ ಚಾಲನಾ ಪರವಾನಗಿ ಅನ್ನು ಮೂರು ತಿಂಗಳ ಮಟ್ಟಿಗೆ ಅಮಾನತಿನಲ್ಲಿ ಇಡುವ ಶಿಕ್ಷೆ ನಿಗದಿಪಡಿಸಿದೆ. ಲೈಸೆನ್ಸ್ ಅಮಾನತಿನಲ್ಲಿರುವಾಗ ಪುನಃ ವಾಹನ ಚಲಾಯಿಸಿದಲ್ಲಿ ಒಂದು ಲಕ್ಷದ ವರೆಗೂ ಫೈನ್ ವಿಧಿಸಲಾಗುವುದು. ಟ್ರಾಫಿಕ್ ಸಿಗ್ನಲ್ ಗಳ ಉಲ್ಲಂಘನೆಗೂ ಹಿಂದಿನದಕ್ಕಿಂತ ಹಲವು ಪಟ್ಟು ದಂಡ, ಅಪ್ರಾಪ್ತ ಮಕ್ಕಳು ವಾಹನ ಚಲಾಯಿಸಿದಲ್ಲಿ, ಅವರ ಕೈಯಲ್ಲಿ ವಾಹನ ಕೊಟ್ಟವರಿಗೆ ಜೈಲು ಹಾಗೂ ಆ ವಾಹನದ ನೋಂದಣಿಯನ್ನು ಶಾಶ್ವತವಾಗಿ ರದ್ದು ಮಾಡುವ ಶಿಕ್ಷೆಗಳನ್ನೂ ನೂತನ ಶಾಸನದಲ್ಲಿ ರೂಪಿಸಲಾಗಿದೆ.

ಸಾರಿಗೆ ನಿಯಮ ಉಲ್ಲಂಘಿಸುವವರ ಮೇಲಿನ ಶಿಕ್ಷೆಯನ್ನು ಕಠಿಣಗೊಳಿಸಿದುದರ ವಿರುದ್ಧವಾಗಿ ಕೆಲ ಸಾರ್ವಜನಿಕರು ಮಾತನಾಡುತ್ತಿದ್ದಾರೆ. ಮಾಧ್ಯಮ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಬದಲಾದ ಕಾನೂನಿನ ವಿರುದ್ಧ ಆಕ್ಷೇಪ, ಲೇಖನ, ವ್ಯಂಗ್ಯಚಿತ್ರ, ಮೀಮ್‌ಗಳು ಕಾಣಿಸಿಕೊಳ್ಳುತ್ತಿವೆ. ಸರಕಾರ ಹಾಳಾದ, ಹೊಂಡ ಬಿದ್ದ ರಸ್ತೆಗಳನ್ನು ಸರಿಪಡಿಸಿದ ಮೇಲೆ ಸಾರಿಗೆ ನಿಯಮ ಉಲ್ಲಂಘನೆ ಮಾಡುವವರ ಮೇಲೆ ಕ್ರಮ ಕೈಗೊಳ್ಳಲಿ, ಸರಿಯಾಗಿ ಕೆಲಸ ಮಾಡದ ಅಧಿಕಾರಿಗಳ ವಿರುದ್ಧ ದಂಡ ವಿಧಿಸಲಿ ಎಂದೆಲ್ಲಾ ಕಿಡಿ ಕಾರುತ್ತಿದ್ದಾರೆ. ಬಡ ವಾಹನ ಚಾಲಕರ ಮೇಲೆ ವಿಧಿಸಿರುವ ದಂಡ ಅತಿಯಾಯಿತು ಎನ್ನುತ್ತಿದ್ದಾರೆ.

ನಮ್ಮ ದೇಶದಲ್ಲಿ ವರ್ಷವೊಂದಕ್ಕೆ ಏನಿಲ್ಲವೆಂದರೂ 5 ಲಕ್ಷ ರಸ್ತೆ ಅಪಘಾತಗಳು ಸಂಭವಿಸುತ್ತವೆ. ಇದರ ಪರಿಣಾಮವಾಗಿ 1.5 ಲಕ್ಷ ಜನರು ಪ್ರಾಣ ಕಳೆದುಕೊಂಡರೆ, 3 ಲಕ್ಷ ಜನರು ತೀವ್ರ ಗಾಯಾಳುಗಳಾಗಿ ಆಸ್ಪತ್ರೆ ಸೇರಬೇಕಾಗುತ್ತದೆ. ಅರ್ಧದಷ್ಟು ಅಪಘಾತಗಳು ರಸ್ತೆಗಳ ದೋಷದಿಂದ, ರಸ್ತೆ ಹೊಂಡಗಳಿಂದ ಸಂಭವಿಸುತ್ತದೆ ಎಂದುಕೊಂಡರೂ ಉಳಿದ 50% ಅಪಘಾತಗಳು ಸಂಭವಿಸುವುದು ಅಜಾಗರೂಕತೆಯ ಚಾಲನೆ ಹಾಗೂ ನಿಯಮ ಉಲ್ಲಂಘಿಸಿ ವಾಹನ ಚಾಲನೆ ಮಾಡುವುದರಿಂದ. ಈ ಲೆಕ್ಕಾಚಾರದಲ್ಲಿ ವಾರ್ಷಿಕ 75,000 ಜನರು ನಿರ್ಲಕ್ಷ್ಯದ ಚಾಲನೆಯಿಂದ ಪ್ರಾಣ ಕಳೆದುಕೊಳ್ಳುವಂತಾದರೆ, 1.5 ಲಕ್ಷ ಜನರು ಇದೇ ಕಾರಣಕ್ಕೆ ಕೈಕಾಲು ಎಲುಬುಗಳನ್ನು ಮುರಿದುಕೊಂಡು ಆಸ್ಪತ್ರೆ ಸೇರುತ್ತಾರೆ. ಬಹಳಷ್ಟು ಜನರು ಶಾಶ್ವತವಾಗಿ ಅಂಗ ವಿಹೀನರಾಗುತ್ತಾರೆ. ಅತಿ ವೇಗದ ಚಾಲನೆಯಿಂದ ಆಗುವ ರಸ್ತೆ ಅಪಘಾತಗಳಲ್ಲಿ ಶೇ.41 ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಎಂದು ಅಧ್ಯಯನವೊಂದು ಹೇಳುತ್ತದೆ.

ಅಂಕಿ ಅಂಶಗಳ ಪ್ರಕಾರ, 2017ರಲ್ಲಿ ದೇಶದಲ್ಲಿ ದಿನವೊಂದಕ್ಕೆ 98 ಮಂದಿ ಹೆಲ್ಮೆಟ್ ಇಲ್ಲದೆ ಪ್ರಯಾಣ ಮಾಡಿದ ಬೈಕ್ ಸವಾರರು ಬೈಕ್ ಅಪಘಾತಗಳಲ್ಲಿ ಸಾವನ್ನಪ್ಪಿದ್ದಾರೆ. ಅಂದರೆ ವರ್ಷವೊಂದಕ್ಕೆ 35,000 ಕ್ಕಿಂತಲೂ ಹೆಚ್ಚು ವ್ಯಕ್ತಿಗಳು ಹೆಲ್ಮೆಟ್ ಧರಿಸದೆ ಬೈಕ್ ಸವಾರಿ ಮಾಡಿದ ಸಂದರ್ಭದಲ್ಲಿ ಅಪಘಾತಕ್ಕೆ ಒಳಗಾಗಿ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ ಎಂದಾಯಿತು.

ಹೆಲ್ಮೆಟ್ ಧರಿಸದೇ ಇರುವುದಕ್ಕಾಗಿ ಕಡಿಮೆ ದಂಡ ಇದ್ದಾಗ ಒಂದು ಬಾರಿ ಫೈನ್ ಕಟ್ಟಿದವರೂ ಅದೇ ತಪ್ಪನ್ನು ಹಲವು ಬಾರಿ ಪುನರಾವರ್ತಿಸುತ್ತಿದ್ದರು. ಈಗ ಏರಿದ ದಂಡದ ಮೊತ್ತ ಹಾಗೂ ಚಾಲನಾ ಪರವಾನಗಿಯ ಅಮಾನತುಗೊಳ್ಳುವಿಕೆಯ ಭಯದಿಂದ ದ್ವಿಚಕ್ರ ವಾಹನವನ್ನು ಹೆಲ್ಮೆಟ್ ಧರಿಸಿಯೇ ಚಾಲನೆ ಮಾಡುವ ಸಾಧ್ಯತೆ ಹೆಚ್ಚಿದೆ. ಇದರಿಂದಾಗಿ ಬೈಕ್ ಅಪಘಾತಗಳ ಸಾವಿನ ಸಂಖ್ಯೆಯೂ ಕಡಿಮೆಯಾಗಲಿದೆ. ಕಾರು ಅಥವಾ ನಾಲ್ಕು ಚಕ್ರದ ವಾಹನ ಚಲಾವಣೆಯ ಸಂದರ್ಭದಲ್ಲಿ ನಡೆಯುವ ಅಪಘಾತಗಳಲ್ಲಿ 79% ಸಾವುಗಳು ಸಂಭವಿಸುವುದು ಸೀಟ್ ಬೆಲ್ಟ್ ಧರಿಸದೆ ಪ್ರಯಾಣಿಸುವುದರಿಂದ ಎಂದು ಅಂಕಿ ಅಂಶಗಳು ಹೇಳುತ್ತವೆ. 2017 ನೇ ಇಸವಿಯಲ್ಲಿ ಸೀಟ್ ಬೆಲ್ಟ್ ಧರಿಸದ ಕಾರಣ ಕಾರು ಅಪಘಾತಗಳಲ್ಲಿ ಮರಣಿಸಿದವರ ಸಂಖ್ಯೆ 28,986, ತೀವ್ರವಾಗಿ ಗಾಯಗೊಂಡವರ ಸಂಖ್ಯೆ 33,264. 2017 ರಲ್ಲಿ ಸೀಟ್ ಬೆಲ್ಟ್ ಧಾರಣೆ ಕಡ್ಡಾಯವಾಗಿದ್ದಿದ್ದರೆ ಈ ಎಲ್ಲಾ ಸಾವು ನೋವುಗಳ ಪ್ರಮಾಣವನ್ನು ಕಡಿಮೆಗೊಳಿಸಬಹುದಾಗಿತ್ತು.

ಮದ್ಯಪಾನ ಮಾಡಿ ವಾಹನ ಚಲಾಯಿಸುವುದು ವಾಹನ ಅಪಘಾತದ ಇನ್ನೊಂದು ಪ್ರಮುಖ ಕಾರಣವಾಗಿದೆ. ಹೊಸ ವರ್ಷ ಆಚರಣೆ, ವಾರಾಂತ್ಯ ಆಚರಣೆ ಅಥವಾ ಇತರ ಹಬ್ಬಗಳ ಸಂದರ್ಭದಲ್ಲಿ ಹಾಗೂ ರಾತ್ರಿ ಹೊತ್ತು ಸಂಭವಿಸುವ ಅಪಘಾತಗಳಲ್ಲಿ ಕುಡಿತ ಅಥವಾ ಮಾದಕ ವಸ್ತುಗಳ ಪ್ರಭಾವವು ಕಾಣುತ್ತದೆ. 2017 ನೇ ಇಸವಿಯಲ್ಲಿ ಕುಡಿತ ಅಥವಾ ಮಾದಕ ವಸ್ತುಗಳ ಪ್ರಭಾವದಲ್ಲಿ ವಾಹನ ಚಾಲನೆ ಮಾಡಿದುದರ ಪರಿಣಾಮವಾಗಿ 14,071 ಅಪಘಾತಗಳು ದೇಶದಲ್ಲಿ ಸಂಭವಿಸಿದ್ದು ,ಇದರಲ್ಲಿ 4776 ಜನರು ಜೀವವನ್ನು ಕಳೆದುಕೊಂಡಿದ್ದಾರೆ. ಈ ಸಂಖ್ಯೆಯನ್ನು ಗಮನಿಸುವಾಗ ಅಮಲಿನಲ್ಲಿನ ವಾಹನ ಚಾಲನೆಯ ಅಪರಾಧದ ಪರಿಣಾಮವು ಎಷ್ಟು ಅಪಾಯಕಾರಿ ಹಾಗೂ ತೀವ್ರತರವಾದುದು ಎಂಬುದು ಅರ್ಥವಾಗಬಹುದು.

ಮೊಬೈಲ್ ಫೋನ್ ನಲ್ಲಿ ಮಾತನಾಡಿಕೊಂಡು ಅಥವಾ ಇಯರ್ ಫೋನ್ ನಲ್ಲಿ ಹಾಡು ಕೇಳಿಕೊಂಡು ಡ್ರೈವಿಂಗ್ ಮಾಡುವುದು, ಬೈಕ್ ಚಲಾಯಿಸುವುದು ಕೂಡಾ ದೊಡ್ಡ ಮಟ್ಟಿನ ಅಪಘಾತಕ್ಕೆ ಕಾರಣವಾಗುತ್ತಿದೆ. ಭಾರತದಲ್ಲಿ 2017 ರಲ್ಲಿ ವಾಹನ ಚಲಾಯಿಸುತ್ತಿರುವಾಗ ಸೆಲ್ ಫೋನ್ ಗಳಲ್ಲಿ ಮಾತನಾಡುತ್ತಾ ವಾಹನ ಚಲಾಯಿಸಿದುದರಿಂದ 3,172 ಜನರು ಮೃತಪಟ್ಟಿದ್ದಾರೆ. 3,668 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗುವ ಆಟೋರಿಕ್ಷಾ ಅಥವ ವ್ಯಾನ್‌ಗಳು ಕೂಡಾ ನಿಗದಿತ ಮಿತಿಗಿಂತ ಎಷ್ಟೋ ಹೆಚ್ಚು ಮಕ್ಕಳನ್ನು ತುಂಬಿಸಿಕೊಂಡು ಸಾಗುತ್ತವೆ. ಬಹಳಷ್ಟು ರಿಕ್ಷಾ ಹಾಗೂ ವ್ಯಾನ್‌ಗಳಿಗೆ ಮಕ್ಕಳನ್ನು ಶಾಲೆಗೆ ಕೊಂಡು ಹೋಗಲು ಪರವಾನಗಿಯೂ ಇರುವುದಿಲ್ಲ. ಶಾಲಾವಾಹನಗಳಿಗೆ ಪರವಾನಗಿ ಸಿಗಲು ಸಾಕಷ್ಟು ಸುರಕ್ಷಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಆದರೆ ಈ ವಾಹನಗಳಲ್ಲಿ ಅಂತಹ ಯಾವುದೇ ವ್ಯವಸ್ಥೆ ಇರುವುದಿಲ್ಲ. ಅಪಘಾತ ಸಂಭವಿಸಿದಾಗ ಮಕ್ಕಳ ಸಾವು ಸಂಭವಿಸಿತ್ತದೆ. ವರುಷವೊಂದಕ್ಕೆ ಇದರಿಂದಾಗಿ ಸಾವಿರಾರು ಮಕ್ಕಳು ಸಾವನ್ನಪ್ಪುತ್ತಾರೆ.

ಹಾಗೆಯೇ ಸಾಮಾನುಗಳನ್ನು ಸಾಗಿಸುವ ವಾಹನಗಳಲ್ಲಿ ಜನರನ್ನು ಸಾಗಿಸುವುದು ಅಪರಾಧ. ಆದರೆ ದೇಶಾದ್ಯಂತ ಕಟ್ಟಡ ಕಾರ್ಮಿಕರನ್ನು ಹಾಗೂ ಕೂಲಿಯವರನ್ನು ಲಾರಿ, ಗೂಡ್ಸ್ ಟೆಂಪೋ, ಟ್ರ್ಯಾಕ್ಟರ್‌ಗಳಲ್ಲಿ ಭಾರಿ ಸಲಕರಣೆಗಳ ಜೊತೆಯೇ ಕರೆದುಕೊಂಡು ಹೋಗುವುದು ಸರ್ವೇಸಾಮಾನ್ಯ ದೃಶ್ಯ. ಇಂತಹ ಸಂದರ್ಭಗಳಲ್ಲಿ ಅಪಘಾತ ಸಂಭವಿಸಿದರೆ ಅಪಘಾತದ ಏಟಿನ ಜೊತೆಗೆ ಸಲಕರಣೆಗಳು ಮೈಮೇಲೆ ಬಿದ್ದು ಈ ಕಾರ್ಮಿಕರು ಸಾವನ್ನಪ್ಪುತ್ತಿದ್ದಾರೆ. ಇವರು ಪ್ರಯಾಣಿಸಿದ ವಾಹನ ಸರಕು ಸಾಗಣೆಯ ವಾಹನವಾದುದರಿಂದ ಗಾಯಗೊಂಡವರಿಗೆ ಹಾಗೂ ಮರಣಿಸಿದವರಿಗೆ ಯಾವುದೇ ರೀತಿಯ ಪರಿಹಾರ ಕೂಡಾ ದೊರಕುವುದಿಲ್ಲ.

ಸರಕು ಸಾಗಣೆಯ ವಾಹನಗಳಲ್ಲಿ ಕಬ್ಬಿಣದ ಸರಳು ಮುಂತಾದವುಗಳು ವಾಹನದ ಅಳತೆಯನ್ನು ಮೀರುವಂತೆ ಇರಿಸಿ ಸಾಗಾಟ ಮಾಡುವುದರ ಮೇಲೆ ನಿಷೇಧವಿದೆ. ಆದರೆ ಚೂಪಾದ ಸರಳುಗಳು ಹಾಗೂ ಮರಮಟ್ಟುಗಳನ್ನು ಇತರ ವಾಹನಗಳ ಪ್ರಯಾಣಿಕರಿಗೆ ತಾಗುವಂತೆ ಕೊಂಡು ಹೋಗುವುದು ಮುಂದುವರಿದಿದೆ. ಈ ವಾಹನಗಳ ಅಪಘಾತವು ಸಂಭವಿಸಿದಾಗ ರಸ್ತೆಯಲ್ಲಿರುವ ಇತರ ವಾಹನಗಳ ಪ್ರಯಾಣಿಕರು ಈ ಅಪಾಯಕಾರಿ ಸರಂಜಾಮುಗಳೆಡೆಗೆ ಸಿಲುಕಿ ಮರಣವನ್ನಪ್ಪುತ್ತಾರೆ. ಭಾರತದಲ್ಲಿ ವಾರ್ಷಿಕವಾಗಿ 9,000 ದಷ್ಟು ಜನರು ಈ ರೀತಿಯ ಅಪಘಾತಕ್ಕೆ ಸಿಲುಕಿ ಜೀವ ಕಳೆದುಕೊಳ್ಳುತ್ತಾರೆ.

ವಿಮೆ ಇಲ್ಲದೆ ವಾಹನಗಳನ್ನು ಓಡಿಸುವುದು ಭಾರತೀಯರು ಎಸಗುತ್ತಿರುವ ಇನ್ನೊಂದು ಬಹು ದೊಡ್ಡ ಅಪರಾಧ. ಒಂದು ಲೆಕ್ಕಾಚಾರದ ಪ್ರಕಾರ ದೇಶದ 70% ವಾಹನಗಳನ್ನು ಜನರು ಇನ್ಶೂರೆನ್ಸ್ ಇಲ್ಲದೆ ಓಡಿಸುತ್ತಿದ್ದಾರೆ. ವಾಹನಕ್ಕೆ ವಿಮೆ ಇಲ್ಲದಿದ್ದಾಗ ಅಪಘಾತಕ್ಕೆ ಒಳಗಾದವರಿಗೆ ವಿಮಾ ಪರಿಹಾರವನ್ನು ಕೊಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ಬದಲಾದ ಕಾನೂನಿನಡಿಯಲ್ಲಿ ಇನ್ಶೂರೆನ್ಸ್ ಇಲ್ಲದೆ ಓಡಿಸುವ ವಾಹನ ಚಾಲಕರಿಗೆ/ ಮಾಲೀಕರಿಗೆ ಭಾರಿ ದಂಡವನ್ನು ವಿಧಿಸಲಾಗುತ್ತಿದೆ.

ಆಂಬುಲೆನ್ಸ್‌ಗಳಿಗೆ ದಾರಿ ಬಿಡದಿರುವುದು, ಕರ್ಕಶ ಹಾರನ್ ಹಾಕಿ ಓಡಿಸುವುದು, ಟ್ರಾಫಿಕ್ ಸಿಗ್ನಲ್ ಗಳನ್ನು ಉಲ್ಲಂಘಿಸುವುದು, ಪಾದಚಾರಿಗಳ ಸಂಚಾರಕ್ಕೆ ಮೀಸಲಿಟ್ಟ ಫುಟ್‌ಪಾತ್ ಗಳಲ್ಲಿ, ರಸ್ತೆಯ ರಾಂಗ್ ಸೈಡ್ ನಲ್ಲಿ ವಾಹನ ಚಲಾಯಿಸುವುದು, ರಾತ್ರಿ ಹೊತ್ತಿನಲ್ಲಿ ಪ್ರಖರವಾದ ಹೆಡ್ ಲೈಟ್‌ಗಳನ್ನು ಉರಿಸಿ, ಎದುರು ಬದಿಯಿಂದ ಬರುವ ವಾಹನಗಳಿಗೆ ತೊಂದರೆ ಉಂಟುಮಾಡುವುದು, ನಿಷೇಧಿತ ಸ್ಥಳಗಳಲ್ಲಿ ಪಾರ್ಕಿಂಗ್ ಮಾಡುವುದು, ಅಪಾಯಕಾರಿ ಸ್ಥಳಗಳಲ್ಲಿ ಓವರ್‌ಟೇಕ್ ಮಾಡುವುದು, ಮಿತಿಗಿಂತ ಹೆಚ್ಚು ಸಂಖ್ಯೆಯ ಪ್ರಯಾಣಿಕರನ್ನು ಸಾಗಿಸುವುದು ಮುಂತಾದ ಬೇಜವಾಬ್ದಾರಿ ವರ್ತನೆಗಳಿಗೆ ದೇಶಾದ್ಯಂತ ಸಾವಿರಾರು ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ.

ಇನ್ನು ಭಾರತದಲ್ಲಿ ಸಂಭವಿಸುವ ವಾಹನ ಅಪಘಾತಗಳಲ್ಲಿ 65% ಬಲಿಪಶುಗಳು 18 ರಿಂದ 35 ವರ್ಷ ವಯಸ್ಸಿನವರು. ಹೆಲ್ಮೆಟ್ ಇಲ್ಲದೆ ದ್ವಿಚಕ್ರ ವಾಹನ ಚಾಲನೆ, ಸೀಟ್ ಬೆಲ್ಟ್ ಇಲ್ಲದೆ ಕಾರು ಚಾಲನೆ, ಅತಿವೇಗದ ಚಾಲನೆ, ವ್ಹೀಲಿಂಗ್ ಮಾಡುವುದು, ಮೊಬೈಲ್ ಫೋನ್ ಗಳಲ್ಲಿ ಮಾತನಾಡುತ್ತಾ ಚಾಲನೆ ಮಾಡುವವರಲ್ಲಿ, ರಸ್ತೆ ನಿಯಮ ಉಲ್ಲಂಘನೆ ಮಾಡುವವರಲ್ಲಿ ಹೆಚ್ಚಿನವರು ಯುವಕರೇ. ವಯೋಸಹಜವಾದ ಅತ್ಯುತ್ಸಾಹ ಹಾಗೂ ಕಾನೂನಿನ ಭಯ ಇಲ್ಲದಿರುವುದು ಇವರ ಇಂತಹ ದುಸ್ಸಾಹಸಗಳಿಗೆ ಕಾರಣವಾಗಿದೆ. ಹಾಗಾಗಿ ಭಾರಿ ಮೊತ್ತದ ಜುಲ್ಮಾನೆಗಳ ಹಾಗೂ ಜೈಲುಶಿಕ್ಷೆಯ ಭಯವನ್ನು ಹುಟ್ಟಿಸುವ ಮೂಲಕ ಮಾತ್ರ ಸಂಚಾರ ನಿಯಮ ಉಲ್ಲಂಘಿಸುವವರನ್ನು ನಿಯಂತ್ರಿಸಲು ಸಾಧ್ಯ.

ಜೀವಕ್ಕಿಂತ ಅಮೂಲ್ಯವಾದದ್ದು ಯಾವುದೂ ಅಲ್ಲ. ಪ್ರಜೆಗಳ ಜೀವಕ್ಕೆ ಹಾನಿಯಾಗದಂತೆ ತಡೆಗಟ್ಟುವುದು ಸರಕಾರದ ಆದ್ಯ ಕರ್ತವ್ಯವಾಗಿದೆ. ವಾಹನ ಸಂಚಾರ ನಿಯಮಗಳನ್ನು ಬಿಗಿಗೊಳಿಸುವುದರ ಮೂಲಕ ಚಾಲನಾ ಅಪರಾಧಗಳನ್ನು ಕಡಿಮೆಗೊಳಿಸಿ ಜೀವಹಾನಿಯನ್ನು ತಡೆಗಟ್ಟುವುದು ಸರಕಾರದ ಈ ಕ್ರಮದ ಹಿಂದಿನ ಪ್ರಮುಖ ಉದ್ದೇಶವಾಗಿದೆ. ಹಳೆಯ ಕಾನೂನು ಅಷ್ಟು ಪರಿಣಾಮಕಾರಿಯಲ್ಲ ಎಂದಾದಾಗ ಕಾನೂನನ್ನು ಪರಿಷ್ಕೃತಗೊಳಿಸುವುದು ಅನಿವಾರ್ಯವಾಗುತ್ತದೆ. ರಸ್ತೆ ಗುಂಡಿ, ಹಾಳಾದ ರಸ್ತೆ, ಅವೈಜ್ಞಾನಿಕ ರಸ್ತೆ ಮುಂತಾದವುಗಳಿಂದ ಜೀವ ಹಾನಿಯಾಗುತ್ತದೇನೋ ನಿಜ. ಇಂತಹ ಆಕ್ಷೇಪಗಳಿಗೆ ಉತ್ತರವಾಗಿ, ಕಳಪೆ ಗುಣಮಟ್ಟದ ರಸ್ತೆ ತಯಾರಿಸುವ ಗುತ್ತಿಗೆದಾರರ ಹಾಗೂ ಅಧಿಕಾರಿಗಳ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿಯವರು ಹೇಳಿದ್ದಾರೆ. ಅದರೊಂದಿಗೆ ಪ್ರತಿ ಪ್ರಜೆಯೂ ಟ್ರಾಫಿಕ್ ನಿಯಮಗಳನ್ನು ಸರಿಯಾಗಿ ಪರಿಪಾಲಿಸುವಂತಾದರೆ ಈಗ ಆಗುತ್ತಿರುವ ಅಪಘಾತ ಹಾನಿಯಲ್ಲಿ 50% ಆದರೂ ಕಡಿಮೆ ಮಾಡಬಹುದಲ್ಲವೇ? ವಾಹನ ಚಾಲಕರಲ್ಲಿ ಎಲ್ಲಾ ರೀತಿಯ ದಾಖಲೆಗಳು ಇದ್ದರೆ, ಅವರು ಸಂಚಾರ ನಿಯಮಗಳನ್ನು ಸಮರ್ಪಕವಾಗಿ ಪಾಲಿಸಿಕೊಂಡಿದ್ದರೆ ಅವರಿಗೆ ಯಾವುದೇ ಶಿಕ್ಷೆಯ ಭಯವಿಲ್ಲ. ಡಿಜಿ ಲಾಕರ್‌ಗಳ ಮೂಲಕ ಇವನ್ನು ಸಂಗ್ರಹಿಸಿಟ್ಟುಕೊಳ್ಳಲು ಸರಕಾರ ಮಾನ್ಯತೆ ನೀಡಿದೆ.

ಸಂಚಾರ ನಿಯಮಗಳ ಸುಧಾರಿತ ಕಾನೂನು ಪಾಲಿಸುವಾಗ ಮೊದಲ ಹಂತದಲ್ಲಿ ಒಂದಷ್ಟು ತೊಂದರೆ ಹಾಗೂ ಅನನುಕೂಲವಾಗುವುದು ಇದ್ದದ್ದೇ. ರೂಢಿಯಾದಮೇಲೆ ತನ್ನಿಂತಾನೇ ಎಲ್ಲವೂ ಸರಿಹೋಗುತ್ತದೆ. ಕ್ರಮೇಣ ಎಲ್ಲರೂ ಬದಲಾವಣೆಗೆ ಹೊಂದಿಕೊಳ್ಳುತ್ತಾರೆ.ಅಲ್ಲಿಗೆ ಗೊಣಗಾಟ ನಿಲ್ಲುತ್ತದೆ. ಹಾಗಾಗಲಿ ಎಂದು ಆಶಿಸೋಣ.

ಅಪಾಯಕಾರಿಯಾಗುತ್ತಿರುವ ಆನ್‌ಲೈನ್ ಆಟದ ಗೀಳು

ಪ್ರಚಲಿತ

ಶಶಿಧರ ಹಾಲಾಡಿ

vveditoped@gmail.com

> **ನಮ್ಮ ದಿನಚರಿಯಲ್ಲಿ ಇನ್ನಿಲ್ಲದಂತೆ ಬೆರೆಯುತ್ತಿರುವ ಸ್ಮಾರ್ಟ್‌ಫೋನ್ ಮತ್ತು ಅಗ್ಗದ ಡಾಟಾ (ಇಂಟರ್ನೆಟ್)ನ ದುರುಪಯೋಗದಿಂದಾಗಿ, ಆ ಒಬ್ಬ ತಂದೆಯ ಜೀವ ಹಾರಿಹೋಯಿತು. ನಿವೃತ್ತ ರಕ್ಷಣಾ ಸಿಬ್ಬಂದಿಯಾಗಿದ್ದ ಆ ತಂದೆ ಮಾಡಿದ್ದಾದರೂ ಏನು? ಆನ್‌ಲೈನ್ ಮೊಬೈಲ್ ಗೇಮ್‌ನಲ್ಲಿ ತನ್ನ ಬದುಕನ್ನೇ ಮೂರಾಬಟ್ಟೆ ಮಾಡಿಕೊಳ್ಳಲು ಹೊರಟಿದ್ದ ಮಗನಿಗೆ, ಕಟುವಾದ ಮಾತಿನಲ್ಲಿ ಬುದ್ಧಿ ಹೇಳಿದ್ದು. ಅಷ್ಟಕ್ಕೇ ಅಡಿಕ್ಟಿವ್ ಗೇಮ್ (ಗೀಳು ಹಿಡಿಸುವ ಆಟ)ಗಳಿಗೆ ದಾಸನಾಗಿದ್ದ, ನಿರಂತರವಾಗಿ ಅಂತಹ ಆಟದಲ್ಲಿ ತೊಡಗಿಕೊಳ್ಳುವ ಮೂಲಕ ಮಾನಸಿಕ ಸ್ತಿಮಿತ ಕಳೆದುಕೊಂಡಿದ್ದ ಆ ಮಗ, ಕತ್ತಿ ಹಿಡಿದು ತನ್ನ ತಂದೆಯನ್ನೇ ಕತ್ತರಿಸಿ ಹಾಕಿದ.**

ಎಚ್ಚರಿಕೆಯ ಗಂಟೆ ಎಲ್ಲೆಡೆ ಬಾರಿಸುತ್ತಿದೆ; ಆಧುನಿಕ ಮಾನವ ಎಂಬ ಎರಡು ಕಾಲಿನ ಜೀವಿಯನ್ನು ದಾರಿ ತಪ್ಪದಿರು ಎಂದು ಎಚ್ಚರಿಸುತ್ತಿದೆ – ಹಳಿ ತಪ್ಪುತ್ತಿರುವ ದಿನಚರಿಯನ್ನು ಸರಿಪಡಿಸಿಕೋ, ಇಲ್ಲವಾದರೆ ಸಂಸ್ಕೃತಿ ಮತ್ತು ನಾಗರಿಕತೆಯ ತಳಪಾಯವೇ ಸಡಿಲಗೊಳ್ಳಬಹುದು ಎಂಬ ವಾರ್ನಿಂಗ್ ದೊರೆಯುತ್ತಿದೆ. ಆಧುನಿಕ ಮಾನವ ಈ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಿ, ದಾರಿ ತಪ್ಪುತ್ತಿರುವ ನವ ನಾಗರಿಕತೆಯನ್ನು ಸರಿಪಡಿಸಿಕೊಳ್ಳಬೇಕಿದೆ. ಇಲ್ಲವಾದರೆ, ಮುಂದಿನ ದಿನಗಳ ಸಾಮಾಜಿಕ ವಾತಾವರಣ ಬಿಗಡಾಯಿಸಬಹುದು!

ಬೆಳಗಾವಿ ಜಿಲ್ಲೆಯ ಕಾಕತಿಯಲ್ಲಿ ನಿನ್ನೆ ನಡೆದ ಒಂದು ದಾರುಣ ಹತ್ಯೆಯನ್ನು ಎಚ್ಚರಿಕೆ ಗಂಟೆ ಎಂದೇ ಪರಿಗಣಿಸಬೇಕು. ಆಧುನಿಕ ಯುಗದ ಕೂಸುಗಳಾದ ಮತ್ತು ನಮ್ಮ ದಿನಚರಿಯಲ್ಲಿ ಇನ್ನಿಲ್ಲದಂತೆ ಬೆರೆಯುತ್ತಿರುವ ಸ್ಮಾರ್ಟ್‌ಫೋನ್ ಮತ್ತು ಅಗ್ಗದ ಡಾಟಾ (ಇಂಟರ್ನೆಟ್)ನ ದುರುಪಯೋಗದಿಂದಾಗಿ, ಆ ಒಬ್ಬ ತಂದೆಯ ಜೀವ ಹಾರಿಹೋಯಿತು. ನಿವೃತ್ತ ರಕ್ಷಣಾ ಸಿಬ್ಬಂದಿಯಾಗಿದ್ದ ಆ ತಂದೆ ಮಾಡಿದ್ದಾದರೂ ಏನು? ಆನ್‌ಲೈನ್ ಮೊಬೈಲ್ ಗೇಮ್‌ನಲ್ಲಿ ತನ್ನ ಬದುಕನ್ನೇ ಮೂರಾಬಟ್ಟೆ ಮಾಡಿಕೊಳ್ಳಲು ಹೊರಟಿದ್ದ ಮಗನಿಗೆ, ಕಟುವಾದ ಮಾತಿನಲ್ಲಿ ಬುದ್ಧಿ ಹೇಳಿದ್ದು. ಅಷ್ಟಕ್ಕೇ ಅಡಿಕ್ಟಿವ್ ಗೇಮ್ (ಗೀಳು ಹಿಡಿಸುವ ಆಟ)ಗಳಿಗೆ ದಾಸನಾಗಿದ್ದ, ನಿರಂತರವಾಗಿ ಅಂತಹ ಆಟದಲ್ಲಿ ತೊಡಗಿಕೊಳ್ಳುವ ಮೂಲಕ ಮಾನಸಿಕ ಸ್ತಿಮಿತ ಕಳೆದುಕೊಂಡಿದ್ದ ಆ ಮಗ, ಕತ್ತಿ ಹಿಡಿದು ತನ್ನ ತಂದೆಯನ್ನೇ ಕತ್ತರಿಸಿ ಹಾಕಿದ. ದಿನಗಟ್ಟಲೆ, ಗಂಟೆಗಟ್ಟಲೆ ಹಿಂಸೆ ತುಂಬಿದ ಆನ್‌ಲೈನ್ ಗೇಮ್‌ಗಳನ್ನು ಆಡುತ್ತಿದ್ದ ಆ ಯುವಕ, ಅದೇ ಆಟದ ಪಟ್ಟುಗಳನ್ನು ನಿಜ ಜೀವನಕ್ಕೂ ಆರೋಪಿಸಿಕೊಂಡು, ತಂದೆಯನ್ನೇ, ಆಟದಲ್ಲಿನ ಎದುರಾಳಿಯಂತೆ, ಸಾಯಿಸಿಬಿಟ್ಟ.

ಆ ಪರಿಯ ಹಿಂಸೆಯನ್ನು ಒಳಗೊಂಡಿರುವ ಆಟದ ಪಟ್ಟುಗಳೇ ಅಂತಹವು. ಎದುರಾಳಿಯನ್ನು, ಕೊನೆಕೊನೆಗೆ ಗೆಳೆಯರೆನಿಸಿಕೊಂಡವರನ್ನೂ ಗುಂಡಿಟ್ಟು ಸಾಯಿಸುವ 'ಪಬ್‌ಜಿ (ಪ್ಲೇಯರ್ ಅನ್‌ನೋನ್ಸ್ ಬ್ಯಾಟಲ್‌ಗ್ರೌಂಡ್)' ಆಟದಲ್ಲಿ, ಹೆಚ್ಚು ಮಂದಿಯನ್ನು ಸಾಯಿಸಿದಷ್ಟೂ ಆಟದಲ್ಲಿ ಪ್ರಗತಿ! ಪ್ಯಾರಾಶೂಟ್ ಬಳಸಿ, ದ್ವೀಪವೊಂದರಲ್ಲಿ ಇಳಿಯುವ ನೂರು ಮಂದಿ ಆಟಗಾರರು, ಒಬ್ಬರಿಗೊಬ್ಬರು ಹೊಡೆದಾಡಿಕೊಂಡು ಸಾಯಿಸುವ ಆಟ ಇದು– ಸಾಯಿಸಲ್ಪಟ್ಟವನ ಆಯುಧಗಳು ಕೊಂದವರ ವಶಕ್ಕೆ; ದ್ವೀಪದ ಜಾಗ ಕ್ರಮೇಣ ಚಿಕ್ಕದಾಗುವುದರಿಂದಾಗಿ, ಬಂದೂಕುಧಾರಿಗಳಾದ ಒಬ್ಬರನ್ನೊಬ್ಬರು ಎದುರಿಸುವ ಸಂದರ್ಭ ಜಾಸ್ತಿಯಾಗುತ್ತಲೇ ಹೋಗುತ್ತದೆ. ಎಲ್ಲರನ್ನೂ ಸಾಯಿಸುವಾತ ಕೊನೆಗೆ ವಿಜಯಿ. ಹಿಂಸೆಯೇ ಬಂಡವಾಳ ಎನಿಸಿರುವ ಈ ಆನ್‌ಲೈನ್ ಗೇಮ್‌ನಲ್ಲಿ, ವಿವಿಧ ರೀತಿಯ ಡ್ರೆಸ್ ಮತ್ತಿತರ ಆಕರ್ಷಣೆಗಳನ್ನು ಮಾರುವ ಮೂಲಕ, ಆಟಗಾರರ ಸಮಾವೇಶ ನಡೆಸಿ, ಸ್ಪರ್ಧೆ ಏರ್ಪಡಿಸಿ ಸಂಸ್ಥೆ ಲಾಭ ಗಳಿಸುತ್ತದೆ.

ಕಾಕತಿಯಲ್ಲಿ ತಂದೆಯನ್ನೇ ಸಾಯಿಸಿದ ಆ ಮಗ, ದಿನವಿಡೀ ಪಬ್‌ಜಿ ಆಟವಾಡುವ ಗೀಳಿಗೆ ಬಿದ್ದಿದ್ದ. ರಾತ್ರಿ–ಹಗಲು ಎನ್ನದೇ, ಗಂಟೆಗಟ್ಟಲೆ ಆಟದಲ್ಲೇ ಮುಳುಗಿದ್ದ ಆ ಯುವಕ, ಮನಸ್ಸಿನೊಳಗೆ ಹಿಂಸೆಯನ್ನೇ ಮನೆ ಮಾಡಿಕೊಂಡಿದ್ದ. ಕೆಲವೇ ದಿನಗಳ ಹಿಂದೆ ತನ್ನ ಮನಸ್ಸಿನ ಉದ್ವೇಗ ತಾಳಲಾರದೇ, ಪಕ್ಕದ ಮನೆಗೆ ಕಲ್ಲು ಹೊಡೆದು ರಂಪಾಟ ಮಾಡಿದ್ದ. ಹಾಗಂತ, ಆತ ಅವಿದ್ಯಾವಂತನಲ್ಲ; ಡಿಪ್ಲೊಮಾ ತನಕ ಓದಿದ್ದು, ಸೂಕ್ತ ಕೆಲಸ ದೊರೆಯದೇ, ಹಿಂಸಾತ್ಮಕ ಮೊಬೈಲ್ ಗೇಮ್‌ಗಳ ದಾಸನಾಗಿದ್ದ. ಇನ್ನೊಂದು ರೀತಿಯಲ್ಲಿ ಹೇಳಬಹುದಾದರೆ, ಪಬ್‌ಜಿಯಂತಹ ಮೊಬೈಲ್ ಆಟಗಳಿಗೆ ಅಡಿಕ್ಟ್ ಆಗಿದ್ದರಿಂದಲೇ, ಉದ್ಯೋಗ ಅರಸುವ ಕೆಲಸಕ್ಕೆ ತಿಲಾಂಜಲಿ ಇತ್ತಿದ್ದ, ಆ ಯುವಕ. ನಮ್ಮ ನಾಗರಿಕತೆಗೆ ದೊರೆಯುತ್ತಿರುವ ಎಚ್ಚರಿಕೆ ಗಂಟೆಯ ಒಂದು ತರಂಗ ಇದು!

ಮೇ ತಿಂಗಳ ಕೊನೆಯ ವಾರದಲ್ಲಿ ಮಧ್ಯ ಪ್ರದೇಶದಲ್ಲಿ, 16 ವರ್ಷದ ಯುವಕನೋರ್ವ ಪಬ್‌ಜಿಗೆ ಬಲಿಯಾದದ್ದು ಸುದ್ದಿಯಾಯಿತು. ಈ ಯುವಕ ನಿರಂತರವಾಗಿ ಪಬ್‌ಜಿ ಆಟವಾಡಿ, ರಕ್ತದೊತ್ತಡವನ್ನು ಹೆಚ್ಚಿಸಿಕೊಂಡು, ಹೃದಯಾಘಾತಕ್ಕೆ ಬಲಿಯಾದ ಘಟನೆ, ಎಲ್ಲರ ಕಣ್ಣು ತೆರೆಯಿಸಬೇಕಿತ್ತು. ಗಂಟೆಗಟ್ಟಲೆ ಆ ಆಟಕ್ಕೆ ದಾಸರಾಗುವಂತಹ ರೋಚಕತೆ ಅದರಲ್ಲಿ ತುಂಬಿರುವುದು ಒಂದು ಮಟ್ಟದ ಆತಂಕ ತಂದರೆ, ಆಟವಾಡುತ್ತಲೇ, ಹೃದಯವನ್ನೇ ಸ್ತಂಭನಗೊಳಿಸುವ ಸ್ಥಿತಿಯನ್ನು ಅದು ತರಬಹುದೆಂಬ ವಾಸ್ತವ ಇನ್ನೊಂದೆಡೆ. ಆ ಯುವಕ ಆ ಸ್ಥಿತಿ ತಲುಪಲು ಅದೆಷ್ಟೋ ದಿನಗಳ ಕಾಲ, ಸರಿಯಾಗಿ ನಿದ್ರೆ ಮಾಡದೇ, ಆನ್‌ಲೈನ್‌ನಲ್ಲಿ ಮುಳುಗಿರಲು ಸಾಕು; ಊಟ, ತಿಂಡಿ, ಅಧ್ಯಯನ, ಸಾಮಾಜಿಕ ಜೀವನ, ಸಹೃದಯ ಮಾತುಕತೆಗಳಿಗೆ ತಿಲಾಂಜಲಿ ಇಟ್ಟು, ಒಬ್ಬರನ್ನೊಬ್ಬರು ಕೊಲ್ಲುವ ಸನ್ನಿವೇಶವನ್ನು ಮೊಬೈಲ್‌ನಲ್ಲಿ ಅದೆಷ್ಟೋ ಸಾವಿರ ಬಾರಿ ಅನುಭವಿಸಿರಬೇಕು; ಆ ಪಾಟಿ ಮಾನಸಿಕ ಒತ್ತಡ ತಾಳಲಾರದೇ, ಆ ಯುವಕನ ಹೃದಯವೇ ನಿಂತುಹೋಯಿತು.

ಹಾಗೆ ನೋಡಹೋದರೆ, ಹಲವು ಆನ್‌ಲೈನ್ ಆಟಗಳಲ್ಲಿ ಮತ್ತು ವಿಡಿಯೋ ಗೇಮ್‌ಗಳಲ್ಲಿ, ಅಡಿಕ್ಷನ್‌ಗೆ ದೂಡುವ ಗುಣವಿದೆ; ಅಡಿಕ್ಷನ್ ಹುಟ್ಟಿಸುವ ಮೂಲಭೂತ ಅಂಶವೇ ಅಂತಹ ಆಟಗಳ ಜನಪ್ರಿಯತೆಯನ್ನು ಹೆಚ್ಚಿಸುತ್ತವೆ ಮತ್ತು ಗೇಮ್‌ನ ಯಶಸ್ಸಿನ ಮಾನದಂಡ ಎನಿಸುತ್ತದೆ. ಪಬ್‌ಜಿ 2017ರಲ್ಲಿ ಬಿಡುಗಡೆಯಾದನಂತರ, ಅತಿ ಜನಪ್ರಿಯ ಸ್ಥಾನ ಪಡೆಯುವಲ್ಲೂ ಸಹ ಇದೇ ಮಾನದಂಡ ಕೆಲಸ ಮಾಡಿದೆ. ಅದರಲ್ಲಿ ಅಡಕಗೊಂಡಿರುವ ಹಿಂಸೆ, ಶೂಟಿಂಗ್, ರೋಚಕ ಸನ್ನಿವೇಶ, ಅನಿರೀಕ್ಷಿತ ತಿರುವುಗಳೇ, ಆ ಆಟವನ್ನು ಅತಿ ಹೆಚ್ಚು ಅಡಿಕ್ಟಿವ್ ಮಾಡಿವೆ; ಆಟವಾಡಿದವರ ಸಮಯ ಹಾಳುಗೆಡವುದರ ಜತೆಯಲ್ಲೇ, ಮಾನಸಿಕ ಸ್ಥಿತಿಯನ್ನೇ ಏರುಪೇರು ಮಾಡುವ ಶಕ್ತಿ ಹೊಂದಿವೆ.



ಡಿಸೆಂಬರ್ 2017ರಲ್ಲಿ– ಅಂದರೆ ಬಿಡುಗಡೆಯಾಗಿ ನಾಲ್ಕು ತಿಂಗಳುಗಳಲ್ಲಿ ಪಬ್‌ಜಿ ಆಟವಾಡಿದವರ ಅಂಕಿಸಂಖ್ಯೆಗಳನ್ನು ನೋಡಿದರೆ, ಆ ಅವಧಿಯಲ್ಲಿ 10 ಮಿಲಿಯನ್ ರೌಂಡ್ ಆಟ ನಡೆದಿದೆ–ಅಂದರೆ ಸುಮಾರು 25,000 ಮಾನವ ವರ್ಷದಷ್ಟು ಸಮಯ ಅದನ್ನು ಆಡಲಾಗಿತ್ತು. ಒಮ್ಮೆ ಡೌನ್‌ಲೋಡ್ ಮಾಡಿಕೊಂಡು, ಆಡಲು ಆರಂಭಿಸಿದರೆ, ಮನವನ್ನೇ ಆಕ್ರಮಿಸುವ ಪಬ್‌ಜಿ ಆಟದ ಸುಳಿಗೆ ಸಿಕ್ಕವರು, ಹೊರಬರಲು ಹರಸಾಹಸ ಮಾಡಬೇಕು; ಡಿ ಅಡಿಕ್ಷನ್ ಕೇಂದ್ರಗಳಿಗೆ ಹೋಗಬೇಕು; ಪಬ್‌ಜಿ ಅಂತಹ ಗೇಮ್‌ಗಳಿಗೆ ದಾಸರಾಗುವುದೆಂದರೆ, ಡ್ರಗ್ ವ್ಯಸನಕ್ಕೆ ಗುರಿಯಾದಂತೆ ಎಂದಿದ್ದಾರೆ ಮಾನಸಿಕ ತಜ್ಞರು. ಇಂತಹ ಆಟಗಳಿಗೆ ವಿದ್ಯಾರ್ಥಿಗಳು ಬಲಿಯಾದರೆ, ಅವರ ಶೈಕ್ಷಣಿಕ ಪ್ರಗತಿಗೆ ತಿಲಾಂಜಲಿ ಇಟ್ಟಂತೆ. ಅದಕ್ಕೆಂದೇ ಕಳೆದ ವರ್ಷ ರಾಜಸ್ಥಾನ ಮತ್ತು ಇತರ ರಾಜ್ಯಗಳು ಪರೀಕ್ಷೆಯ ಸಮಯದಲ್ಲಿ ಪಬ್‌ಜಿ ಆಟವನ್ನು ನಿಷೇಧಿಸಿದ್ದವು. ಇದರಲ್ಲಿ ಅಡಕಗೊಂಡಿರುವ ಹಿಂಸೆಯ ಹಿನ್ನೆಲೆಯಲ್ಲಿ ದೂರದ ಜೋರ್ಡಾನ್ ದೇಶದಲ್ಲೂ ಪಬ್‌ಜಿ ನಿಷೇಧಗೊಂಡಿದೆ. 13 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಇದನ್ನ ಲಾಕ್ ಮಾಡಿದ್ದೇವೆ ಎಂದು ಪಬ್‌ಜಿ ಸಂಸ್ಥೆಯವರು ಘೋಷಿಸಿದ್ದಾರೆ.

ಪಬ್‌ಜಿ ಸೃಷ್ಟಿಸುವ ಅಡಿಕ್ಷನ್ ಪ್ರಮಾಣವನ್ನು ಅಳೆಯುವುದೇ ಕಠಿಣ. ಮನೋತಜ್ಞರು ಇಂತಹ ಗೀಳನ್ನು ಸಲೀಸಾಗಿ ಗುರುತಿಸುತ್ತಾರೆ, ಗುರುತಿಸಿದ್ದಾರೆ, ಎಚ್ಚರಿಸಿದ್ದಾರೆ, ಪರಿಹಾರವನ್ನೂ ಸೂಚಿಸಿದ್ದಾರೆ. ಡಿ ಅಡಿಕ್ಷನ್ ತಂತ್ರಗಳ ಕುರಿತು ಸೂಕ್ತ ಸಲಹೆ ನೀಡುತ್ತಾರೆ. ಮಕ್ಕಳಿಗೆ ಅಂತಹ ಆಟವಾಡಲು ಅವಕಾಶ ನೀಡಬೇಡಿ ಎಂಬ ಶಿಫಾರಸನ್ನೂ ಮಾಡುತ್ತಾರೆ.

ಇಂದು ಕಾಲ ಬದಲಾಗಿದೆ. ಒಂದೆರಡು ಕ್ಲಿಕ್ ಮಾಡಿದರೆ ಉಚಿತ ಗೇಮ್ ಡೌನ್‌ಲೋಡ್ ಮಾಡಿಕೊಳ್ಳಬಹುದು; ಇನ್ನೊಂದೆರಡು ಕ್ಲಿಕ್ ಮಾಡಿದರೆ ಪಬ್‌ಜಿಯಂತಹ ಪರಸ್ಪರ ಶೂಟ್ ಮಾಡಿಕೊಳ್ಳುವ, ಇಡೀ ದ್ವೀಪದಲ್ಲಿರುವ ಎಲ್ಲರನ್ನೂ ಶೂಟ್ ಮಾಡಲು ಪ್ರೇರೇಪಿಸುವ ಆಟದಲ್ಲಿ ಮುಳುಗಿಹೋಗಬಹುದು. ಹಿಂಸೆಯನ್ನು ತುಂಬಿಕೊಂಡಿರುವ, ಮನುಷ್ಯರ ಮೇಲೆ ಶೂಟಿಂಗ್ ಮಾಡುವುದನ್ನೇ ಪ್ರೇರೇಪಿಸುವ ಆಟಗಳನ್ನು ಆಡುವ ಮಕ್ಕಳು, ಯುವ ಜನಾಂಗ, ಸುತ್ತಲಿನ ಸಮಾಜವನ್ನು ನೋಡುವ ದೃಷ್ಟಿಯೇ ಕ್ರಮೇಣ ಬದಲಾಗುವ ಸಾಧ್ಯತೆ ಇಲ್ಲದಿಲ್ಲ. ಬೆಳೆಯುತ್ತಿರುವ ಮಕ್ಕಳು ಸಹ ಆಟಗಾರರನ್ನು ಸಾಯಿಸುವ ಆಟ, ನಿಯಮಿತವಾಗಿ ಆಡಿದರೆ, ಮುಂದೆ ಅವರ ಚಿಂತನಾ ಕ್ರಮವೇ ಬದಲಾಗಬಹುದಲ್ಲವೆ? ಸುತ್ತಲಿನ ಎಲ್ಲರನ್ನೂ ಮುಗಿಸಿ, ಸಾಯಿಸಿ, ವಿಜಯಿಯಾಗುವ ಮನೋಸ್ಥಿತಿ ನಿಜ ಜೀವನದಲ್ಲೂ ಅವರು ಅಳವಡಿಸಿಕೊಳ್ಳುವ ಸಾಧ್ಯತೆ ಅಧಿಕ. ಪರಸ್ಪರ ಸಹಕರಿಸಿ, ಅರಿತು, ಸಮಾಜವನ್ನು ಕಟ್ಟುವ ನಾಗರಿಕತೆಯ ಮೂಲಭೂತ ಅಂಶವನ್ನೇ ಮರೆಯುವ, ಹಿಂಸೆಯಿಂದಲೇ ಎಲ್ಲವನ್ನೂ ನೋಡುವ ನಾಗರಿಕರ ದಂಡೇ ಇದರಿಂದ ಸೃಷ್ಟಿಯಾದಂತಾಗುವುದಿಲ್ಲವೆ?

ಅದಕ್ಕೆಂದೇ, ಬೆಳಗಾವಿಯ ಕಾಕತಿಯಲ್ಲಿ ನಿನ್ನೆ ನಡೆದ ಘಟನೆಯನ್ನು ಎಚ್ಚರಿಕೆಯ ಗಂಟೆಯಾಗಿ ಪರಿಗಣಿಸಬೇಕು. ಅಂತರ್ಜಾಲದಿಂದ ಸುಲಲಿತವಾಗಿ ಡೌನ್‌ಲೋಡ್ ಆಗುವ ಪಬ್‌ಜಿಯಂತಹ ಹಿಂಸೆ ತುಂಬಿದ ಆಟಕ್ಕೆ ಮಕ್ಕಳು, ಯುಜನರು ಬಲಿಯಾಗದಂತೆ ಮಾಡಲು ಉಪಾಯಗಳನ್ನು ಯೋಚಿಸಬೇಕು. ಸರಕಾರ ಮನಸ್ಸು ಮಾಡಬೇಕು. ರಾಜಸ್ಥಾನ ಮೊದಲಾದ ರಾಜ್ಯಗಳು ಪಬ್‌ಜಿಯನ್ನು ತಾತ್ಕಾಲಿಕವಾಗಿ ನಿಷೇಧಿಸಿದ್ದವು. ಗುಂಡಿಟ್ಟು ಸಾಯಿಸುವ ಮನೋಸ್ಥಿತಿಯನ್ನು ಪಾಠಮಾಡುವ ಪಬ್‌ಜಿಯಂತಹ ಆಟಗಳನ್ನು ಶಾಶ್ವತವಾಗಿ ನಿಷೇಧಿಸುವ ಕ್ರಮವನ್ನು ಕರ್ನಾಟಕ ಸರಕಾರ ಸಹ ತೆಗೆದುಕೊಳ್ಳಲು ಇದೇ ಸಕಾಲ. ಚಲನಚಿತ್ರಗಳ ಬಿಡುಗಡೆಗೆ ಮುಂಚೆ ಸೆನ್ಸಾರ್ ಮಂಡಳಿ ಕೆಲಸ ಮಾಡುವಂತೆ, ನಾಗರಿಕ ಸಮಾಜದ ಚಿಂತನಾ ಕ್ರಮವನ್ನು ರಕ್ಷಿಸಲು, ಹಿಂಸೆಭರಿತ, ಮನುಷ್ಯರನ್ನು ಕೊಲ್ಲುವ ಸನ್ನಿವೇಶ ಇರುವ ವಿಡಿಯೋ ಮತ್ತು ಆನ್‌ಲೈನ್ ಆಟಗಳನ್ನು ನಿಷೇಧಿಸಲು ಸರಕಾರ ಮುಂದಾಗಬೇಕು. ಕಾಕತಿಯ ದುರ್ಘಟನೆಯನ್ನು ಗಂಭೀರವಾಗಿ ಪರಿಗಣಿಸದಿದ್ದಲ್ಲಿ, ಹಿಂಸೆ ತುಂಬಿರುವ ಆನ್‌ಲೈನ್ ಆಟಗಳಿಗೆ ದಾಸರಾಗುವ ನಾಗರಿಕರು ಮತ್ತು ಯುವಜನತೆ ಆಟದ ಗೀಳಿನಿಂದಾಗಿ ತಂದೆಯನ್ನೇ ಏಕೆ, ಎಲ್ಲರನ್ನೂ ಕೊಲ್ಲುವ ಮಟ್ಟಕ್ಕೆ ಇಳಿದಾರು.